ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 18-05-1969

(ओम शान्ति, बापदादा. अव्यक्त मुरली 18-05-1969)

***ಆತ್ಮಿಕ ಜ್ಞಾನ – ಯೋಗದ ಜೋತಿಷಿ*** (रूहानी ज्ञान-योग की ज्योतिषी)

ತಾವೆಲ್ಲ ಬಾಪದಾದಾರವರನ್ನು ಕರೆದಿರುವಿರೋ ಅಥವಾ ತಮ್ಮನ್ನು ಅವರು ಕರೆದಿರುವರೋ? ಯಾರು ಯಾರನ್ನು ಕರೆದಿರುವರು? ತಂದೆಯ ಕರ್ತವ್ಯದಲ್ಲಿ ನಿಮಿತ್ತರಾಗಿರುವ ಮಕ್ಕಳು, ನಾವು ಎಲ್ಲ ಸಮಯದಲ್ಲಿ, ಎಲ್ಲ ಪರಿಸ್ಥಿತಿಯಲ್ಲಿ ಸದಾಸಿದ್ಧ ಮತ್ತು ಸರ್ವತೋಮುಖವಾಗಿರಬೇಕು (ever ready & allround) ಎಂಬ ಮಾತನ್ನು ಸದಾಕಾಲ ನೆನಪಿಟ್ಟುಕೊಳ್ಳಬೇಕು. ಒಂದು ವೇಳೆ ಈ ಎರಡು ಮಾತುಗಳು ಎಲ್ಲರಲ್ಲಿ ಬಂದದ್ದಾದರೆ ಸೇವೆಯ ಪ್ರತ್ಯಕ್ಷ ಪ್ರಮಾಣ ಶ್ರೇಷ್ಠವಾಗಿರುವುದು, ಆದರೆ ನಂಬರವಾರ್ ಪುರುಷಾರ್ಥದ ಅನುಸಾರವಾಗಿ ಈ ಮಾತುಗಳು ಇರುತ್ತವೆ. ಒಂದಾಗಿದೆ ತಮ್ಮೊಂದಿಗೆ ತಾವೇ ಅಭಿನಯನ (rehersal), ಇನ್ನೊಂದು ರಂಗಮಂಚದ ಮೇಲೆ ಎಲ್ಲರ ಮುಂದೆ ಅಭಿನಯಿಸುವುದು. ನಾವು ಯಾವ ಕರ್ಮ ಮಾಡುತ್ತೇವೆಯೋ ಅದನ್ನು ನೋಡಿ ಇನ್ನುಳಿದವರು ಮಾಡುತ್ತಾರೆ ಎಂಬ ಸ್ಲೋಗನ್ ನಿಮಿತ್ತರಾದ ಮಕ್ಕಳಿಗೆ ನೆನಪಿರಬೇಕು. ನಾಟಕದ ರಂಗಮಂಚದ ಮೇಲೆ ಎಲ್ಲರ ಸಮ್ಮುಖದಲ್ಲಿ ನಾವು ಪಾತ್ರ ಅಭಿನಯಿಸುತ್ತಿದ್ದೇವೆ ಎಂದು ಸದಾಕಾಲ ತಮ್ಮನ್ನು ತಾವು ತಿಳಿದುಕೊಳ್ಳಿ. ರಂಗಮಂಚದ ಮೇಲೆ ಅಭಿನಯಿಸುವವರ ಗಮನ ತಮ್ಮ ಕಡೆಗೆ ಎಷ್ಟಿರುತ್ತದೆ. ಪ್ರತಿಯೊಂದು ಅಭಿನಯದ ಮೇಲೂ ಸದಾ ಎಚ್ಚರಿಕೆಯಿರುತ್ತದೆ. ಕೈ, ಕಾಲು,ಕಣ್ಣುಗಳ ಮೇಲೆ ಗಮನವಿರುತ್ತದೆ. ಒಂದು ವೇಳೆ ಯಾವುದಾದರೂ ಮಾತಿನಲ್ಲಿ ಹೆಚ್ಚು ಕಡಿಮೆಯಾದರೆ ಪಾತ್ರಧಾರಿಯ ಅಭಿನಯ ಶೋಭಿಸುವುದಿಲ್ಲ. ಆದ್ದರಿಂದ ತಮ್ಮನ್ನು ತಾವು ಅದೇ ರೀತಿ ತಿಳಿದುಕೊಂಡು ಮುನ್ನಡೆಯಬೇಕು.

ಮೂರು ನಿಮಿಷದ ಧ್ವನಿಮುದ್ರಣಕ್ಕೆ (record)ಗೆ ಎಷ್ಟೊಂದು ಗಮನ ಕೊಡುತ್ತಾರೆ. ತಾವೆಲ್ಲರೂ ತಮ್ಮ 21 ಜನ್ಮಗಳ ರೆಕಾರ್ಡನ್ನು ತುಂಬಿಕೊಳ್ಳುತ್ತಿರುವಿರಿ. ಹಾಗಾದರೆ ಮುದ್ರಣಕ್ಕೆ ಎಷ್ಟು ಗಮನ ಕೊಡಬೇಕು. ಮುದ್ರಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ಆ ಮುದ್ರಣ ಸದಾಕಾಲಕ್ಕೂ ರದ್ದಾಗಿಬಿಡುತ್ತದೆ. ನಿಮ್ಮದೂ ಸಹ 21 ಜನ್ಮಗಳಿಗೆ ಸತ್ಯಯುಗದ ರಾಜಧಾನಿಯ ಮುದ್ರಣವು ರದ್ದಾಗಬಾರದು. ಒಂದು ವೇಳೆ ರದ್ದಾದರೆ ದೂರವಾಗುವಿರಿ. ಎಲ್ಲರ ದೃಷ್ಟಿ ನಮ್ಮ ಪ್ರತಿ ಕರ್ಮದ ಮೇಲಿದೆ ಎಂದು ಯೋಚಿಸಬೇಕು. ತಮ್ಮ ಕಡೆಗೆ ಎಲ್ಲರೂ ನೋಡುತ್ತಿದ್ದಾರೆ ಎಂದು ತಿಳಿದಾಗ ಅಭಿನಯಿಸುವವರು ವಿಶೇಷ ಎಚ್ಚರಿಕೆ ವಹಿಸುತ್ತಾರೆ. ನೋಡುವವರು ಯಾರೂ ಇಲ್ಲದಾಗ ಅಷ್ಟಾಗಿ ಕಾಳಜಿ ವಹಿಸುವುದಿಲ್ಲ. ಆದ್ದರಿಂದ ಒಬ್ಬರೇ ಇರುವಾಗ, ನಾವು ಸೃಷ್ಟಿಯ ಮುಂದೆ ಇದ್ದೇವೆ, ಸೃಷ್ಟಿಯ ಆತ್ಮಗಳು ನಾಲ್ಕೂ ಕಡೆಗಳಿಂದಲೂ ನಮ್ಮನ್ನು ನೋಡುತ್ತಿದ್ದಾರೆ.

ಒಂದೊಂದು ಹೂ ಈ ರೀತಿ ಸಂಪೂರ್ಣ ಮತ್ತು ಸುಂದರವಾದರೆ ಈ ಹೂದೋಟದ ಸುಗಂಧ ಎಷ್ಟೊಂದು ಹರಡುವುದು. ಆದರೆ ಏಕೆ ಹರಡುವುದಿಲ್ಲ,ಅದಕ್ಕೆ ಕಾರಣವೇನು? ಸುಗಂಧದ ಜೊತೆಗೆ ಅಲ್ಲಲ್ಲಿ ಮಧ್ಯ ಇನ್ನುಳಿದ ಮಾತುಗಳು ಬರುತ್ತವೆ. ಎಷ್ಟೇ ಸುಗಂಧವಿದ್ದರೂ, ತೀವ್ರವಾಗಿ ಹರಡುವ ಸ್ವಲ್ಪ ದುರ್ಗಧ, ಸುಗಂಧವನ್ನು ನಾಶಮಾಡುತ್ತದೆ. ಅವಿನಾಶಿ ಸುಗಂಧಕ್ಕೆ ಸದಾ ಗುಲಾಬಿ ಎಂದು ಹೇಳುತ್ತಾರೆ. ಒಂದಾಗಿದೆ ಸದಾ ಗುಲಾಬಿ, ಎರಡನೆಯದು ಗುಲಾಬಿ, ಮೂರನೆಯದು ಆತ್ಮಿಕ ಗುಲಾಬಿ, ಮೊದಲ ನಂಬರನಲ್ಲಿ ಆತ್ಮಿಕ ಗುಲಾಬಿ, ಅವರು ಆತ್ಮಿಕ ಸ್ಥಿತಿಯಲ್ಲಿರುತ್ತಾರೆ ಮತ್ತು ಆತ್ಮಿಕ ತಂದೆಗೆ ಯಾವಾಗಲೂ ಸಮೀಪದಲ್ಲಿರುತ್ತಾರೆ. ಎರಡನೆಯ ಪ್ರಕಾರದವರು ಸೇವೆಯಲ್ಲಿ ಮುಂದಿರುತ್ತಾರೆ ಆದರೆ ಆತ್ಮಿಕ ಸ್ಥಿತಿಯಲ್ಲಿ ಕಡಿಮೆಯಿರುತ್ತಾರೆ. ಸೇವೆಯಲ್ಲಿ, ಧಾರಣೆಯಲ್ಲಿ ಚೆನ್ನಾಗಿರುತ್ತಾರೆ, ಸಂಸ್ಕಾರವೂ ಶೀತಲವಾಗಿರುತ್ತದೆ. ತಮ್ಮನ್ನು ತಾವು ಏನೆಂದು ತಿಳಿದುಕೊಳ್ಳುತ್ತೀರಿ? ಯಾವ ನಂಬರಿನ ಹೂ ಎಂದು ತಿಳಿಯುತ್ತೀರಿ? ಮುಳ್ಳುಗಳು ಇಲ್ಲಿರಲು ಸಾಧ್ಯವೇ ಇಲ್ಲ. ಎಲ್ಲರೂ ಗುಲಾಬಿ ಹೂಗಳೇ, ಆದರೆ ಗುಲಾಬಿಗಳಲ್ಲಿ ಅಂತರವಿದೆ. ಆತ್ಮಿಕ ಗುಲಾಬಿಗಳ ಲಕ್ಷಣಗಳೇನು ?

ತಮಗೆ ಮಸ್ತಕದ ರೇಖೆಯನ್ನು ಪರೀಕ್ಷಿಸಲು ಬರುತ್ತದೆಯೇ? ಜ್ಯೋತಿಷಿಗಳು ಆಗಿದ್ದೀರೋ ಇಲ್ಲವೋ? ಬಾಪ್‌ದಾದಾ ಯಾವ ಜ್ಞಾನ ಮತ್ತು ಯೋಗದ ಜ್ಯೋತಿಷಿಗಳನ್ನು ತೋರಿಸುತ್ತಾರೆಯೋ ಅವರಿಂದ ಏನನ್ನು ನೋಡುತ್ತೀರಿ? ಪ್ರತಿಯೊಬ್ಬರ ಮುಖದಿಂದ, ನಯನಗಳಿಂದ, ಮಸ್ತಕದಿಂದ ಗೊತ್ತಾಗುತ್ತದೆ. ಅದರಲ್ಲಿಯೂ ವಿಶೇಷ ಮಸ್ತಕ ಮತ್ತು ಕಣ್ಣುಗಳಿಂದ ಗೊತ್ತಾಗುತ್ತದೆ. ತಾವು ಜ್ಯೋತಿಷಿಗಳಾಗಿ ಪ್ರತಿಯೊಬ್ಬರನ್ನೂ ಪರೀಕ್ಷಿಸುತ್ತೀರಾ? ನಯನಗಳಲ್ಲಿ ಮತ್ತು ಮಸ್ತಕದಲ್ಲಿ ಆ ರೇಖೆಗಳು ಅವಶ್ಯವಾಗಿರುತ್ತವೆ. ಯಾರನ್ನು ಪರಿಶೀಲಿಸಬೇಕು ಎಂಬುವುದೂ ಜ್ಯೋತಿಷ್ಯ ವಿದ್ಯೆಯಾಗಿದೆ. ಈ ಪರೀಕ್ಷಿಸುವ ವಿದ್ಯೆ ಅನೇಕರಲ್ಲಿ ಕಡಿಮೆಯಿದೆ. ಜ್ಞಾನ ಮತ್ತು ಯೋಗವನ್ನು ಕಲಿಯುತ್ತೀರಿ ಆದರೆ ಈ ಪರೀಕ್ಷಿಸುವ ಜ್ಯೋತಿಷ್ಯ ವಿದ್ಯೆಯನ್ನೂ ತಿಳಿದುಕೊಳ್ಳಬೇಕು, ಯಾರೇ ಎದುರಿಗೆ ಬಂದಾಗ ತಾವು ಒಂದೇ ಕ್ಷಣದಲ್ಲಿ ಅವರ ಮೂರೂ ಕಾಲಗಳ ಪರೀಕ್ಷೆ ಮಾಡಿಕೊಳ್ಳಬೇಕು. ಒಂದು ಭೂತಕಾಲದಲ್ಲಿ ಅವರ ಜೀವನವೇನಿತ್ತು ಮತ್ತು ವರ್ತಮಾನ ಸಮಯದಲ್ಲಿ ಅವರ ವೃತ್ತಿ, ದೃಷ್ಟಿ ಮತ್ತು ಭವಿಷ್ಯದಲ್ಲಿ ಎಲ್ಲಿಯವರೆಗೆ ತಮ್ಮ ಪ್ರಾಲಬ್ಧವನ್ನು ಮಾಡಿಕೊಳ್ಳಬಲ್ಲರು ಇದನ್ನು ತಿಳಿದುಕೊಳ್ಳುವ ಅಭ್ಯಾಸವಿರಬೇಕು. ಈ ಪರೀಕ್ಷಿಸುವ ಜ್ಞಾನವೇನಿದೆಯೋ ಅದು ಅನೇಕರಲ್ಲಿ ಕಡಿಮೆಯಿದೆ, ಈ ಕೊರತೆಯನ್ನು ಈಗ ತುಂಬಿಕೊಳ್ಳಬೇಕು.

ಬರಲಿರುವ ವರ್ತಮಾನ ಸಮಯದಲ್ಲಿ ಒಂದು ವೇಳೆ ಈ ಗುಣವಿಲ್ಲದಿದ್ದರೆ, ಕಡಿಮೆಯಿದ್ದರೆ ಮೋಸ ಹೋಗುವಿರಿ, ಒಳಗೊಂದು ಹೊರಗೊಂದು ಇರುವಂತಹ ಅನೇಕ ಆತ್ಮರು ತಮ್ಮ ಮುಂದೆ ಬರುವರು. ಇವರು ಕೇವಲ ಬಾಯಿಪಾಠ ಮಾಡಿದ್ದಾರೆಂದು ತಿಳಿದು ಪರೀಕ್ಷೆ ಮಾಡಲು ಬರುವರು, ಮತ್ತೆ ಕೆಲವರು ಅನೇಕ ರಂಗ-ರೂಪಗಳಿಂದ, ಭಿನ್ನ ಭಿನ್ನ ನಕಲಿ ರೂಪದಲ್ಲಿ ಪರೀಕ್ಷಿಸಲು ಬರುವರು. ಆದ್ದರಿಂದ ಇವರು ಏಕೆ ಬಂದಿದ್ದಾರೆ? ಅವರ ವೃತ್ತಿಯೇನು? ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಅಶುದ್ಧ ಆತ್ಮಗಳಿಂದಲೂ ಸಂಭಾಲನೆ ಮಾಡಿಕೊಳ್ಳಬೇಕು. ಈ ರೀತಿಯ ಕೇಸ್‌ಗಳು ಬಹಳ ಬರುವವು, ದಿನದಿನಕ್ಕೆ ಪಾಪಾತ್ಮರು ಹೆಚ್ಚಾಗುತ್ತಾರೆ, ಆಪತ್ತುಗಳು, ಅಕಾಲ ಮೃತ್ಯು, ಪಾಪ ಕರ್ಮಗಳು ಹೆಚ್ಚುತ್ತವೆ, ಅವುಗಳ ತೀರಲಾರದ ಬಯಕೆಗಳು (ವಾಸನೆಗಳು) ಉಳಿಯುತ್ತವೆ, ಆಗ ಅವು ಅಶುದ್ಧ ಆತ್ಮಗಳ ರೂಪದಲ್ಲಿ ಅಲೆದಾಡುತ್ತವೆ. ಆದ್ದರಿಂದ ಇದರ ಸಂಭಾಲನೆಯನ್ನೂ ಬಹಳ ಮಾಡಬೇಕು. ಯಾರಲ್ಲಿಯಾದರೂ ಅಶುದ್ಧ ಆತ್ಮದ ಪ್ರವೇಶವಾದರೆ ಅದನ್ನು ಓಡಿಸಲು ಅಗರಬತ್ತಿಯನ್ನು ಹಚ್ಚುತ್ತಾರೆ ಮತ್ತು ಲೋಹವನ್ನು ಬೆಂಕಿಯಲ್ಲಿ ಕಾಯಿಸಿ ಚುಚ್ಚುತ್ತಾರೆ ಮತ್ತು ಕೆಂಪು ಮೆಣಸಿನಕಾಯಿಯನ್ನು ತಿನ್ನಿಸುತ್ತಾರೆ. ತಮಗೂ ಆಗ ಯೋಗಾಗ್ನಿಯ ಉಪಯೋಗವನ್ನು ಮಾಡಬೇಕಾಗುವುದು, ಪ್ರತಿಯೊಂದು ಕರ್ಮೇಂದ್ರಿಯವನ್ನು ಯೋಗಾಗ್ನಿಯಲ್ಲಿ ಸುಟ್ಟಾಗ ಯಾರೂ ಆಕ್ರಮಣ ಮಾಡಲಾರರು. ಎಲ್ಲಿಯಾದರೂ ಸಡಿಲವಾಗಿದ್ದರೆ, ಯಾವುದಾದರೂ ಕರ್ಮೇಂದ್ರಿಯ ಸಡಿಲವಾದರೆ ಪ್ರವೇಶತೆಯಾಗಬಹುದು. ಆ ಅಶುದ್ಧ ಆತ್ಮಗಳೂ ಬಹಳ ಶಕ್ತಿಶಾಲಿಯಾಗಿರುತ್ತವೆ. ಆ ಮಾಯೆಯ ಶಕ್ತಿಯೂ ಕಡಿಮೆಯಿರುವುದಿಲ್ಲ. ಇದನ್ನು ಬಹಳ ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಅನೇಕ ಪ್ರಕೃತಿ ವಿಕೋಪಗಳು ತಮ್ಮ ಕೆಲಸ ಮಾಡುವವು. ಅವುಗಳನ್ನು ಎದುರಿಸಲು ಈಶ್ವರೀಯ ಶಕ್ತಿಯನ್ನು ಧಾರಣೆ ಮಾಡಿಕೊಳ್ಳಬೇಕು.

ಆ ಸಮಯದಲ್ಲಿ ಸ್ನೇಹವನ್ನು ಇಟ್ಟುಕೊಳ್ಳಬಾರದು, ಆಗ ಶಕ್ತಿರೂಪದ ಅವಶ್ಯಕತೆಯಿದೆ. ಯಾವ ಸಮಯದಲ್ಲಿ ಸ್ನೇಹಮೂರ್ತಿ, ಯಾವ ಸಮಯದಲ್ಲಿ ಶಕ್ತಿರೂಪರಾಗಬೇಕು ಎಂದು ಯೋಚಿಸಬೇಕು. ಈ ಎಲ್ಲ ಮಾತುಗಳಲ್ಲಿ ಶಕ್ತಿರೂಪದ ಆವಶ್ಯಕತೆಯಿದೆ. ಒಂದು ವೇಳೆ ಇಂತಹವರು ಬಂದಾಗ ಅವರಿಗೆ ಸ್ನೇಹ ತೋರಿಸಿದರೆ ಹಲವು ಬಾರಿ ಹಾನಿಯಾಗುತ್ತದೆ. ಬಾಪದಾದಾ ಮತ್ತು ದೈವಿ ಪರಿವಾರದ ಜೊತೆಗೆ ಸ್ನೇಹವಿರಲಿ ಆದರೆ ಉಳಿದೆಲ್ಲವನ್ನು ಶಕ್ತಿರೂಪದಿಂದ ಎದುರಿಸಿ, ಅನೇಕ ಮಕ್ಕಳು ಹುಡುಗಾಟಿಕೆ ಮಾಡಿ ಅಂತಹವರ ಸ್ನೇಹದಲ್ಲಿ ಬರುತ್ತಾರೆ, ಆ ಸ್ನೇಹ ವೃದ್ಧಿಯಾಗಿ ದುರ್ಬಲ ಮಾಡುತ್ತದೆ ಆದ್ದರಿಂದ ಈಗ ಶಕ್ತಿರೂಪದ ಅವಶ್ಯಕತೆಯಿದೆ.

ಕೊನೆಯ ಘೋಷಣೆಯೂ ***ಭಾರತ ಮಾತೆ ಶಕ್ತಿ ಅವತಾರವೆಂದು ಗಾಯನವಿದೆ*** . ಗೋಪಿ ಮಾತೆ ಎಂದು ಹೇಳುವುದಿಲ್ಲ. ಈಗ ಶಕ್ತಿರೂಪದ ಪಾತ್ರವಿದೆ, ಗೋಪಿಕೆಯರ ಪಾತ್ರ ಸಾಕಾರದಲ್ಲಿತ್ತು ಈಗ ಅವ್ಯಕ್ತ ರೂಪದಲ್ಲಿ ಶಕ್ತಿಯ ಪಾತ್ರವಿದೆ. ಪ್ರತಿಯೊಬ್ಬರೂ ತಮ್ಮ ಶಕ್ತಿರೂಪದಲ್ಲಿ ಸ್ಥಿತರಾದಾಗ ಎಲ್ಲರ ಶಕ್ತಿ ಸೇರಿ ಅದ್ಭುತವನ್ನು ತೋರಿಸುವುದು. ಸ್ಮಾರಕದ ರೂಪದಲ್ಲಿ ಅಂತಿಮ ಚಿತ್ರವಾಗಿ ಯಾವುದನ್ನು ತೋರಿಸಲಾಗಿದೆ? ಬೆಟ್ಟಕ್ಕೆ ಬೆರಳನ್ನು ತೋರಿಸುವಂತಹ ಚಿತ್ರ ಶಕ್ತಿಯ ಕೊಡುಗೆಯಾಗಿದೆ. ಇದರಿಂದಲೇ ಕಲಿಯುಗವೆಂಬ ಬೆಟ್ಟ ನಾಶವಾಗುವುದು. ಇದರಲ್ಲಿ ಪ್ರತಿಯೊಬ್ಬರ ಬೆರಳಿನ ಅವಶ್ಯಕತೆಯಿದೆ. ಇನ್ನೂ ಆ ಬೆರಳನ್ನು ಪೂರ್ಣ ಕೊಟ್ಟಿಲ್ಲ. ಬೆಟ್ಟವನ್ನು ಎತ್ತುತ್ತಾರೆ ಆದರೆ ಕೆಲವರ ಬೆರಳು ಕೆಲವು ವೇಳೆ ನೇರವಾಗಿ ಮತ್ತೆ ಕೆಲವು ವೇಳೆ ಸೊಟ್ಟ ಆಗುತ್ತದೆ. ಪೂರ್ಣ ಮತ್ತು ಒಂದೇ ತರಹದ ಸಹಯೋಗವಿದ್ದಾಗ ಪ್ರಭಾವವಾಗುವುದು. ಈ ಕಲಿಯುಗದ ಬೆಟ್ಟವನ್ನು ಬೇಗನೇ ಸಹಯೋಗ ಕೊಟ್ಟು ಸತ್ಯಯುಗದ ಜಗತ್ತನ್ನು ತರಬೇಕು. ಸಾಕಾರನೊಂದಿಗೆ ಸ್ನೇಹವಿದೆಯಾದರೆ ಬೇಗನೇ ಈ ಹಳೆಯ ಜಗತ್ತಿನಿಂದ ಹೋಗುವ ತಯಾರಿ ಮಾಡಿ. ಇನ್ನೂ ಸೇವೆ ಎಲ್ಲಿ ಆಗಿದೆಯೆಂದು ತಾವು ಕೇಳುವಿರಿ ಆದರೆ ಸೇವೆಯೂ ಯಾರಿಗಾಗಿ ನಿಂತಿದೆ? ಒಂದು ವೇಳೆ ತಾವು ಶಕ್ತಿರೂಪದಲ್ಲಿ ಸ್ಥಿತರಾದರೆ, ಮರೆತು ಅಲೆದಾಡುತ್ತಿರುವ ತಮ್ಮ ಭಕ್ತರು ಇಚ್ಛೆಯಿಲ್ಲದಿದ್ದರೂ ಚುಂಬಕದ ಸಮೀಪ ಬರುವರು, ತಡ ಮಾಡುವುದಿಲ್ಲ. ಒಳ್ಳೆಯದು !

ಅವ್ಯಕ್ತ ಮುರಳಿ 18-05-1969.

ಆತ್ಮಿಕ ಜ್ಞಾನ ಯೋಗಗಳ ಜ್ಯೋತಿಷ್ಯ.

ಆತ್ಮಿಕ ಸ್ಥಿತಿಯಲ್ಲಿ ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಮಾಸ್ಟರ್ ಸರ್ವ ಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿ ಸಮಯ, ಪ್ರತಿ ಪರಿಸ್ಥಿತಿಯಲ್ಲಿ ಎವರ್ ರೆಡಿ ಮತ್ತು ಆಲ್ ರೌಂಡರ್ ಆಗಿ ಸೇವೆಯ ಪ್ರತ್ಯಕ್ಷತೆಯನ್ನು ಶ್ರೇಷ್ಠವಾಗಿ ಕೊಟ್ಟಿದ್ದೇನೆ.

2. ನಾನು "ಯಾವ ಕರ್ಮ ಮಾಡಿದರೆ ನನ್ನನ್ನು ನೋಡಿ ಎಲ್ಲರೂ ಮಾಡುತ್ತಾರೆ" ಎಂಬ ಸ್ಲೋಗನ್ ಅನ್ನು ಸ್ಮೃತಿಯಲ್ಲಿ ಇಟ್ಟುಕೊಂಡು ಧಾರಣೆ ಮಾಡುತ್ತಿದ್ದೇನೆ.

3. ನಾನು ಅವಿನಾಶಿ ಸುವಾಸನೆಯುಳ್ಳ ಆತ್ಮಿಕ ಗುಲಾಬಿ.

4. ನಾನು ಆತ್ಮಿಕ ಸ್ಥಿತಿಯಲ್ಲಿ ಇದ್ದು ಸದಾ ತಂದೆಗೆ ಸಮೀಪವಿರುವ ಆತ್ಮಿಕ ಗುಲಾಬಿ ಆಗಿದ್ದೇನೆ.

5. ನಾನು ಯಾವ ವ್ಯಕ್ತಿ ಎದುರಿಗೆ ಬಂದಾಗಲೂ ಅವರ ಮೂರು ಕಾಲಗಳನ್ನು ಕ್ಷಣದಲ್ಲಿ ಪರಿಶೀಲಿಸುವ ಜ್ಯೋತಿಷ್ಯ ವಿದ್ಯೆಯನ್ನು ತಿಳಿದುಕೊಂಡಿದ್ದೇನೆ.

6. ನಾನು ಈಶ್ವರೀಯಶಕ್ತಿ ಮತ್ತು ಯೋಗಾಗ್ನಿಯಿಂದ ಪ್ರಕೃತಿಯ ಆಪತ್ತುಗಳು ಮತ್ತು ಅಶುದ್ಧ ಆತ್ಮರಿಂದ ನನ್ನನ್ನು ನಾನು ರಕ್ಷಿಸಿಕೊಂಡಿದ್ದೇನೆ.

7. ನಾನು ಶಕ್ತಿ ಮತ್ತು ಸ್ನೇಹ ಸ್ವರೂಪಗಳನ್ನು ಸಮಯಾನುಸಾರ ಧಾರಣೆ ಮಾಡಿದ್ದೇನೆ.

8. ನಾನು ಶಕ್ತಿ ಸ್ವರೂಪವನ್ನು ಧಾರಣೆ ಮಾಡಿ ಕಲಿಯುಗೀ ಪರ್ವತವನ್ನು ಸಮಾಪ್ತಿ ಮಾಡಿದ್ದೇನೆ.

9. ನಾನು ಶಕ್ತಿ ಸ್ವರೂಪದಲ್ಲಿ ಸ್ಥಿತವಾಗಿ ಭ್ರಮಿಸುವ ಭಕ್ತರೆಲ್ಲರನ್ನು ಶಿವ ತಂದೆಗೆ ಸಮೀಪ ಮಾಡಿದ್ದೇನೆ.